ಮಾರ್ಚ್/ಏಪ್ರಿಲ್ 2025 ರ ಪರೀಕ್ಷೆ-1
MARCH/APRIL 2025 EXAMINATION-1

**A**

**CCE RF/RR/PF/PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12
[ Total No. of Printed Pages : 12

[ ಒಟ್ಟು ಪ್ರಶ್ನೆಗಳ ಸಂಖ್ಯೆ : 47
[ Total No. of Questions : 47

**ಸಂಕೇತ ಸಂಖ್ಯೆ : 95-K** **Code No. : 95-K**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)**

**(Regular Fresh / Regular Repeater / Private Fresh / Private Repeater)**

ದಿನಾಂಕ : 24. 03. 2025 ] [ Date : 24. 03. 2025

ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-15 ರವರೆಗೆ ] [ Time : 10-00 A.M. to 1-15 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣದ ಗುರುತನ್ನು ಅನುಸರಿಸಿ). ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೋ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಇವೆರಡೂ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

95-K

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ರಷ್ಯಾದ ಜನರ ಮೇಲೆ ಪ್ರಭಾವ ಬೀರಿದ ಚಿಂತಕ

   (A) ಅಬ್ರಹಾಂ ಲಿಂಕನ್

   (B) ರೂಸ್ಸೋ

   (C) ಕಾರ್ಲ್ ಮಾರ್ಕ್ಸ್

   (D) ಮಾಂಟೆ ಸ್ಕ್ಯೂ

2. ಈ ಕೆಳಗಿನವುಗಳಲ್ಲಿ ಪ್ರಜಾಪ್ರಭುತ್ವದ ಯಶಸ್ಸಿಗೆ ಅಗತ್ಯವಾಗಿರುವುದು ಯಾವುದು ?

   (A) ಭ್ರಷ್ಟಾಚಾರ

   (B) ನಿರುದ್ಯೋಗ

   (C) ಅನಾರೋಗ್ಯ

   (D) ಶಿಕ್ಷಣ

3. ಭಾರತದ ರಾಷ್ಟ್ರೀಯ ಯೋಜನಾ ನೀತಿ ಜಾರಿಗೆ ಬಂದ ವರ್ಷ

(A) 1950

(B) 1985

(C) 1948

(D) 1956

4. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕವನ್ನು ಬರೆದವರು

(A) ಗಾಂಧೀಜಿ

(B) ಜಿ.ಎಸ್. ಗುರ್ರೆ

(C) ಜವಾಹರಲಾಲ್ ನೆಹರೂ

(D) ದಯಾನಂದ ಸರಸ್ವತಿ

5. ಚಂಪಾರಣ್ಯ ಸತ್ಯಾಗ್ರಹದ ನೇತೃತ್ವ ವಹಿಸಿದವರು

(A) ಜವಾಹರಲಾಲ್ ನೆಹರೂ

(B) ಬಾಲಗಂಗಾಧರ ತಿಲಕ್

(C) ಮಹಾತ್ಮಾ ಗಾಂಧೀಜಿ

(D) ಸರದಾರ್ ವಲ್ಲಭಭಾಯಿ ಪಟೇಲ್

6. ಹೋಂ ರೂಲ್ ಚಳವಳಿಯನ್ನು ಪ್ರಾರಂಭಿಸಿದವರು

(A) ಆ್ಯನಿ ಬೆಸೆಂಟ್

(B) ಸರೋಜಿನಿ ನಾಯ್ಡು

(C) ಸಾವಿತ್ರಿಬಾಯಿ ಫುಲೆ

(D) ಕ್ಯಾಪ್ಟನ್ ಲಕ್ಷ್ಮೀ

7. ವರದಕ್ಷಿಣೆ ನಿಷೇಧ ಕಾನೂನು ಜಾರಿಗೆ ಬಂದ ವರ್ಷ

(A) 1856

(B) 1976

(C) 1961

(D) 1955

8. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬೆಂಬಲ ನೀಡಿದ ಬ್ರಿಟಿಷ್ ವೈಸ್‌ರಾಯ್

(A) ಮೌಂಟ್ ಬ್ಯಾಟನ್

(B) ಕಾರ್ನ್ ವಾಲೀಸ್

(C) ವೆಲ್ಲೆಸ್ಲಿ

(D) ಡಾಲ್‌ಹೌಸಿ

9. ಗಾಂಧೀಜಿಯವರು ಆದಿವಾಸಿಗಳನ್ನು ಹೀಗೆ ಕರೆದರು

(A) ಗಿರಿಜನರು

(B) ಬುಡಕಟ್ಟು ಜನರು

(C) ಹರಿಜನರು

(D) ವನವಾಸಿಗಳು

10. ಈ ಕೆಳಗಿನವುಗಳಲ್ಲಿ ಮುದ್ರಣ ಮಾಧ್ಯಮ ವರ್ಗಕ್ಕೆ ಸೇರಿರುವುದು

(A) ರೇಡಿಯೋ

(B) ವೃತ್ತಪತ್ರಿಕೆ

(C) ದೂರದರ್ಶನ

(D) ಅಂತರ್ಜಾಲ

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | | ***B*-ಪಟ್ಟಿ** | |
|---|---|---|---|
| (A) | ಬ್ರಹ್ಮ ಸಮಾಜ | (i) | ಕಬೀರ್ |
| (B) | ಆರ್ಯ ಸಮಾಜ | (ii) | ಡಾ. ಆತ್ಮರಾಮ ಪಾಂಡುರಂಗ |
| (C) | ಸತ್ಯಶೋಧಕ ಸಮಾಜ | (iii) | ನಾರಾಯಣ ಗುರು |
| (D) | ಕಬೀರ್ ಪಂಥ | (iv) | ಜ್ಯೋತಿರಾವ್ ಫುಲೆ |
| (E) | ಪ್ರಾರ್ಥನಾ ಸಮಾಜ | (v) | ದಯಾನಂದ ಸರಸ್ವತಿ |
| | | (vi) | ಸ್ವಾಮಿ ವಿವೇಕಾನಂದ |
| | | (vii) | ರಾಜಾ ರಾಮ್‌ಮೋಹನ್ ರಾಯ್ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪದ / ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಕೈಗಾರಿಕೀಕರಣ ಎಂದರೇನು ?

13. ವಲಸೆಯ ಹೆಚ್ಚಳಕ್ಕೆ ಕಾರಣವಾದ ಅಂಶ ಯಾವುದು ?

14. ಪ್ರಾದೇಶಿಕ ಅಸಮತೋಲನ ಎಂದರೇನು ?

15. ಜೈನ ಧರ್ಮದ ಸಂಸ್ಥಾಪಕರು ಯಾರು ?

16. "ಅಸ್ಪೃಶ್ಯತೆಯ ಆಚರಣೆ ಒಂದು ಪಾಪ" ಎಂದು ಹೇಳಿದವರು ಯಾರು ?

17. ಹಿಂದೂ ವಿಧವಾ ಪುನರ್ವಿವಾಹ ಕಾಯಿದೆಯು ಯಾವಾಗ ಜಾರಿಗೆ ಬಂದಿತು ?

18. "ವೇದಗಳಿಗೆ ಹಿಂತಿರುಗಿ" ಎಂಬ ಘೋಷಣೆಯನ್ನು ನೀಡಿದವರು ಯಾರು ?

19. ಕ್ರಾಂತಿಕಾರಿ ಚಳವಳಿಯ ಧ್ಯೇಯವೇನು ?

20. ಪ್ರಾರ್ಥನಾ ಸಮಾಜವನ್ನು ಮೊದಲು ಯಾವ ಹೆಸರಿನಿಂದ ಕರೆಯಲಾಗುತ್ತಿತ್ತು ?

21. ಮಹಿಳಾ ಸಬಲೀಕರಣ ಎಂದರೇನು ?

22. ಭಾರತದ ಮೊದಲ ಮಹಿಳಾ ಪ್ರಧಾನ ಮಂತ್ರಿ ಯಾರು ?

23. ಮಹರ್ಷಿ ಕರ್ವೆಯವರು ಸ್ಥಾಪಿಸಿದ ಮಹಿಳಾ ವಿಶ್ವವಿದ್ಯಾಲಯ ಯಾವುದು ?

24. ಗಿಡಮೂಲಿಕೆಗಳ ಔಷಧಿಗಳ ತಯಾರಿಕೆಯಲ್ಲಿ ಪ್ರಾವಿಣ್ಯತೆಯನ್ನು ಪಡೆದವರು ಯಾರು ?

25. ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಜನರಿರುವ ಪ್ರದೇಶವನ್ನು ಅನುಸೂಚಿತ ಪ್ರದೇಶ ಎಂದು ಘೋಷಿಸುವ ಅಧಿಕಾರ ಯಾರಿಗಿದೆ ?

26. 'ಸಿಲಿಕಾನ್ ಸಿಟಿ' ಎಂದು ಪ್ರಸಿದ್ಧವಾಗಿರುವ ಕರ್ನಾಟಕದ ನಗರ ಯಾವುದು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಸಾಮಾಜಿಕ ಬದಲಾವಣೆಗೆ ಪ್ರೇರಕವಾದ ಪ್ರಮುಖ ಅಂಶಗಳಾವುವು ?

28. ಪ್ರಾದೇಶಿಕ ಅಸಮತೋಲನವನ್ನು ಪ್ರಭಾವಿಸುವ ಅಂಶಗಳನ್ನು ತಿಳಿಸಿ.

29. ಸಾಮಾಜಿಕ ಬದಲಾವಣೆಗೆ ಇರುವ ಅಡ್ಡಿ ಆತಂಕಗಳು ಯಾವುವು ?

30. ಆರ್ಥಿಕ ಸಂಕಷ್ಟದಲ್ಲಿರುವವರು ಸಾಮಾಜಿಕ ಬದಲಾವಣೆಯನ್ನು ವಿರೋಧಿಸಲು ಕಾರಣವೇನು ?

31. 'ಜಾತಿ' ಎಂಬ ಪದದ ಉಗಮವನ್ನು ತಿಳಿಸಿ.

32. ಪಕ್ಕಾ ಆಹಾರ ಮತ್ತು ಕಚ್ಚಾ ಆಹಾರ ಎಂದರೇನು ?

33. ಸಾಮಾಜಿಕ ಚಳವಳಿಗಳ ವಿಧಗಳಾವುವು ?

34. ಮಹಿಳೆಯರ ಆಸ್ತಿ ಮತ್ತು ಉದ್ಯೋಗಕ್ಕೆ ಸಂಬಂಧಿಸಿದ ಯಾವುದಾದರೂ ಎರಡು ಕಾನೂನುಗಳನ್ನು ತಿಳಿಸಿ.

35. ಸ್ವಾತಂತ್ರ್ಯ ಪೂರ್ವದಲ್ಲಿ ವಿವಾಹಕ್ಕೆ ಸಂಬಂಧಿಸಿದಂತೆ ಜಾರಿಗೆ ಬಂದ ಯಾವುದಾದರೂ ಎರಡು ಕಾಯಿದೆಗಳನ್ನು ಬರೆಯಿರಿ.

36. ಹಂಟರ್ ಆಯೋಗವು ಮಹಿಳಾ ಶಿಕ್ಷಣಕ್ಕೆ ನೀಡಿದ ಪ್ರಾಮುಖ್ಯತೆಯ ಬಗ್ಗೆ ಬರೆಯಿರಿ.

37. ಭಾರತದಲ್ಲಿ ಬುಡಕಟ್ಟು ಸಲಹಾ ಸಮಿತಿಯ ಕಾರ್ಯಗಳೇನು ?

38. ಬುಡಕಟ್ಟು ಜನಾಂಗಗಳ ಲಕ್ಷಣಗಳಾವುವು ?

39. ಬುಡಕಟ್ಟು ಜನಾಂಗಗಳ ಅವನತಿಗೆ ಕಾರಣಗಳೇನು ?

40. ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರವೇನು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**$6 \times 3 = 18$**

41. ಜಗತ್ತನ್ನು ಕ್ಷಣಮಾತ್ರದಲ್ಲಿ ಸಂಪರ್ಕಿಸುವ ಪ್ರಮುಖ ಸಂಪರ್ಕ ಸಾಧನಗಳು ಯಾವುವು ?

42. ಜಾತಿ ಪದ್ಧತಿಯ ಲಕ್ಷಣಗಳನ್ನು ಪಟ್ಟಿ ಮಾಡಿ.

43. ಬ್ರಿಟಿಷರ ಕಾಲದಲ್ಲಿ ಮಹಿಳೆಯರ ಜಾಗೃತಿ ಮತ್ತು ಪ್ರಗತಿಗಾಗಿ ಹೋರಾಡಿದ ಮಹಿಳಾ ಸಂಘಟನೆಗಳನ್ನು ಹೆಸರಿಸಿ.

44. ಬುಡಕಟ್ಟುಗಳ ಶಾಸ್ತ್ರೀಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಕೈಗೊಳ್ಳಲಾಗಿರುವ ಪ್ರಯತ್ನಗಳನ್ನು ವಿವರಿಸಿ.

45. ಸಮೂಹ ಮಾಧ್ಯಮವಾಗಿ ರೇಡಿಯೋ ವಹಿಸುತ್ತಿರುವ ಪಾತ್ರವನ್ನು ವಿವರಿಸಿ.

46. ಆಧುನಿಕ ಜೀವನದಲ್ಲಿ ಗಣಕಯಂತ್ರದ ಉಪಯುಕ್ತತೆಯನ್ನು ತಿಳಿಸಿ.

**VI. ಈ ಪ್ರಶ್ನೆಗೆ ನಾಲ್ಕರಿಂದ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

47. ಸಾಮಾಜಿಕ ಬದಲಾವಣೆಯ ಲಕ್ಷಣಗಳನ್ನು ವಿವರಿಸಿ.

DO NOT WRITE ANYTHING HERE